ಯುಗಾದಿ ಪ್ರಬಂಧ ಸ್ಪರ್ಧೆ 2022

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಸ್ವಾಲಿಹ್ ತೋಡಾರ್
ಕಲೆ: ಸಂತೋಷ್ ಸಸಿಹಿತ್ಲು



# ಸುನ್ನತಿ

ಮೊನ್ನೆ ನನ್ನ ಚಿಕ್ಕಮ್ಮನ ನಾಲ್ಕು ವರ್ಷದ ಮೊಮ್ಮಗನಿಗೆ ಸುನ್ನತಿ ಆಯಿತು. ಆ ದಿನ ಮನೆಯಲ್ಲಿ ಹಾಜರಿರಲೇಬೇಕೆಂದು ಚಿಕ್ಕಮ್ಮ ಒತ್ತಾಯಿಸಿ ಕರೆಸಿಕೊಂಡಿದ್ದರು.

ನಾವು ಹೋದಾಗ ಹುಡುಗನಿಗೆ ಇನ್ನೂ ಸುನ್ನತಿಯಾಗಿರಲಿಲ್ಲ. ಹತ್ತು ಗಂಟೆಗೆ ಬರಬೇಕಿದ್ದ ಡಾಕ್ಟರ್ ಅರ್ಧ ಗಂಟೆ ತಡ ಮಾಡಿ ನಗು ನಗುತಾ ಬಂದಿದ್ದರು. ಹುಡುಗ ತುಂಬಾ ಹೆದರಿದ್ದ. ಅವನ ಬಾಡಿದ ಮುಖ ನೋಡಿದಾಗ ನನಗೆ ಅಯ್ಯೋ ಪಾಪ ಎನಿಸಿತು. ಸುನ್ನತಿ ಎಂದರೆ, ಅವನು ಏನು ಕಲ್ಪಿಸಿಕೊಂಡಿದ್ದನೋ ಏನೋ. ಯಾರೋ ಅವನದೇ ವಯಸ್ಸಿನ ಹುಡುಗರು 'ನಿನ್ನ ಅದನ್ನೇ ಕಟ್ ಮಾಡ್ತಾರಂತೆ' ಎಂದು ಅವನನ್ನು ಸುಳ್ಳು ಸುಳ್ಳೇ ಹೆದರಿಸಿದ್ದರಂತೆ. ಅವನು ಅದನ್ನೇ ನಂಬಿ 'ನನಗೆ ಸುನ್ನತಿಯೇ ಬೇಡ' ಎಂದು ವರಾತ ಹಿಡಿದು ಕುಳಿತಿದ್ದ. ಅವನ ಅಪ್ಪ ಅವನ ಭೀತಿಯನ್ನು ದೂರ ಮಾಡಲು ಸುನ್ನತಿ ಎಂದರೆ ಏನೆಂದು ಅವನಿಗೆ ಯೂಟ್ಯೂಬ್‌ನಲ್ಲಿ ವಿಡಿಯೋ ಒಂದನ್ನು ತೋರಿಸಲು ಹೋಗಿ ಅವನನ್ನು ಇನ್ನಷ್ಟು ಭೀತಿಗೆ ತಳ್ಳಿಬಿಟ್ಟಿದ್ದರು. ಅವನು ಅಳುತ್ತಾ ಮನೆಗೆ ಬರುತ್ತಿದ್ದವರನ್ನೆಲ್ಲಾ ತನ್ನ ಅದನ್ನು ಕಟ್ ಮಾಡಲು ಬಂದ ಕಟುಕರೆಂಬಂತೆ ನೋಡಿ, ಚಡ್ಡಿಯ ಮೇಲೆ ಕೈ ಅಡ್ಡ ಇಟ್ಟು ರಾಕೆಟ್‌ಗಿಂತಲೂ ಸ್ಪೀಡಾಗಿ ಓಡುತ್ತಿದ್ದ. ಕಿಲಾಡಿ ಹೆಂಗಸರು ಅವನ ಹಿಂದೆಯೇ ಓಡಿ, 'ನೀನು ಚಡ್ಡಿ ಹಾಕಲು ಹೇಳಿದರೆ ಹಾಕುವುದಿಲ್ಲ ನೋಡು. ಅದಕ್ಕೆ ನಿನ್ನ ಅದನ್ನೇ ಕಟ್ ಮಾಡ್ತಾರೆ ಈಗ. ಬೇಗ ಓಡಿ ಅಡಗಿಕೊ' ಎಂದು